

ಕ್ಯಾನ್ಸರ್‌ನಿಂದ ಕೂದಲು ಕಳೆದುಕೊಂಡವರಿಗಾಗಿ ಕೇಶದಾನ ಮಾಡುತ್ತಿರುವ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು ವಿದ್ಯಾರ್ಥಿನಿಯರು.
(ಪ್ರಜಾವಾಣಿ ಸಂಗ್ರಹ ಚಿತ್ರ)

ಭರವಸೆಯನ್ನೇ ಕಳೆದುಕೊಂಡಿರುತ್ತಾರೆ ಎಂಬುದು ನನಗೆ ಅರಿವಿದೆ. ಇಂಥವರಿಗೆ ನೆರವಾಗುವುದು ನನಗೆ ಖುಷಿ ತಂದಿದೆ' ಎನ್ನುತ್ತಾರೆ ಕಿರುತೆರೆ ನಟಿ ಕಾವ್ಯಾ ಶಾಸ್ತ್ರಿ.

“ಕ್ಯಾನ್ಸರ್ ಚಿಕಿತ್ಸೆಗಾಗಿ ನೀಡುವ ಕಿಮೋಥೆರಪಿಯಿಂದ ಕೂದಲು ಕಳೆದುಕೊಳ್ಳುವವರ ಸಂಕಟ ನನಗೆ ಗೊತ್ತು. ಸಾಧಾರಣವಾಗಿ ನಾವು ನಮ್ಮ ಕೂದಲನ್ನು ಕತ್ತರಿಸಿ ಬಿಸಾಕ್ತೀವಿ. ಚೆನ್ನಾಗಿ ಕಾಣಬೇಕು ಅಂತ ಪಾರ್ಲರ್‌ಗೆ ಹೋಗಿ ಈ ಕೆಲಸ ಮಾಡುತ್ತೇವೆ. ಇದರ ಬದಲಾಗಿ ಅಗತ್ಯ ಇರುವವರಿಗೆ ದಾನ ಮಾಡಿದರೆ ಉಪಯೋಗ ಆಗುತ್ತದೆ. ಕ್ಯಾನ್ಸರ್ ರೋಗಿಗಳದು ಕಷ್ಟಕರವಾದ ಜೀವನ. ತಲೆಗೂದಲು ಕಳೆದುಕೊಂಡರೆ ದೇಹದ ಅಸ್ತಿತ್ವವನ್ನು ಕಳೆದುಕೊಂಡಂತೆ ಎಂಬುದು ಹಲವರ ಭಾವನೆ. ಇಂಥವರಿಗೆ ನಮ್ಮ ಬೆಂಬಲ ಅಗತ್ಯ. ಕಷ್ಟಕರವಾದ ಜೀವನದಲ್ಲಿ ಒಂಟಿಯಾಗಿಲ್ಲ ಎಂಬ ಸಂದೇಶವನ್ನು ಕೇಶದಾನ ಕೊಡುತ್ತದೆ ಎಂಬುದು ನನ್ನ ಅನಿಸಿಕೆ. ‘ವಿ ಹಿಯರ್ ಯು, ವಿ ಸೀ ಯು, ಯು ಸ್ಟ್ರಾಂಗ್’ ಅಂತ ಇಂಥವರಿಗೆ ಹೇಳಿದರೆ ಖಂಡಿತ ನೆಮ್ಮದಿ ಸಿಗುತ್ತದೆ' ಎಂಬುದು ನನ್ನ ನಂಬಿಕೆ” ಎನ್ನುತ್ತಾರೆ ಕಾವ್ಯಾ.

“2020ರಲ್ಲಿ ಕೋವಿಡ್ ಸಮಯದಲ್ಲಿ ಮೊದಲ ಬಾರಿಗೆ ಪ್ಲಾಸ್ಮ ದಾನ ಮಾಡಿದ್ದೀನಿ. ಇದನ್ನು ಸರ್ಕಾರ ಗಮನಿಸಿತ್ತು. ಮರಣಾನಂತರ ಶ್ವಾಸಕೋಶ, ಕಿಡ್ನಿ ದಾನಕ್ಕೆ ನಿರ್ಧರಿಸಿರುವೆ. 2016ರಲ್ಲೇ ಕಣ್ಣು ಹಾಗೂ ದೇಹದ ಎಲ್ಲ ಅಂಗಗಳನ್ನು ದಾನ ಮಾಡುವ ತೀರ್ಮಾನ ಮಾಡಿದ್ದೀನಿ. ಸತ್ತ ನಂತರ ನಮ್ಮ ದೇಹ ಉಪಯೋಗ ಬರದೆ ಮಣ್ಣಲ್ಲಿ ಮಣ್ಣಾಗಿ ಹಾಳಾಗುವ ಬದಲು ಬೇರೆಯವರಿಗೆ ಸಿಗಲಿ ಅಂತ ಇದರ ಉದ್ದೇಶ. ಈಗಾಗಲೇ 17–18 ಬಾರಿ ರಕ್ತದಾನ ಮಾಡಿದ್ದೀನಿ. ಇದರಿಂದ ನಮ್ಮ ಆರೋಗ್ಯವೂ ವೃದ್ಧಿಯಾಗುತ್ತದೆ. ಬೇರೆಯವರಿಗೆ ಉಪಯೋಗವೂ ಆಗುತ್ತದೆ” ಎನ್ನುವ ಕಾಳಜಿ ಅವರದು.

“ನಮ್ಮನ್ನು ಕಿರುತೆರೆ ಮೂಲಕ ಬಹಳ ಜನ ನೋಡುವುದರಿಂದ ನಾವು ಮಾಡುವ ಕೆಲಸವನ್ನೂ ಗಮನಿಸ್ತಾರೆ. ಹೀಗಾಗಿ ಜವಾಬ್ದಾರಿಯಿಂದ ಹೆಜ್ಜೆ ಇಡಬೇಕಾಗುತ್ತದೆ. ‘ಬೆಂಗಳೂರು ಹೇರ್ ಡೊನೇಷನ್ ಸಂಸ್ಥೆ’ಗೆ ನಾನು ಕೇಶದಾನ ಮಾಡಿದ ಮೇಲೆ ನನ್ನನ್ನು ನೋಡಿಕೊಂಡು 25–30 ಜನ ಕೂದಲು ದಾನ ಮಾಡಿದ್ರು. ‘inspired by you’ ಅಂತ ತುಂಬ ಜನ ಬಂದು ತಲೆಗೂದಲು ದಾನ ಮಾಡಿದ್ದು ಹೆಮ್ಮೆಯ ವಿಚಾರ.

ಜೊತೆಗೆ ಅಂಗಾಂಗವನ್ನೂ ದಾನ ಮಾಡ್ತೀವಿ ಅಂತನೂ ಅರ್ಜಿ ಸಲ್ಲಿಸಿದ್ರು. ಇದು ನಮ್ಮಿಂದ ಬೇರೆಯವರಿಗೆ ಉಪಯೋಗ ಆಗಲಿ ಎಂಬುದಕ್ಕೆ ನಾವು ಕೊಡುವ ಸಂದೇಶವೂ ಆಗುತ್ತದೆ. ನಮ್ಮ ಬದುಕು ಸಾರ್ಥಕತೆ ಪಡೆಯುತ್ತದೆ” ಎನ್ನುತ್ತಾರೆ ಕಾವ್ಯಾ.

## ಭರವಸೆಯ ಬೆಳ್ಳಿಕಿರಣಗಳು

‘ಸೀಡ್ಸ್ ಫಾರ್ ಹೋಪ್’ ಎಂಬುದು ಪುತ್ತೂರಿನ ವಿದ್ಯಾರ್ಥಿಗಳ ಒಂದು ತಂಡ. ಆದ್ಯಾ ಸುಲೋಚನ ಈ ತಂಡದ ನಾಯಕಿ. ಈಗ ಎಂಜಿನಿಯರಿಂಗ್ ವಿದ್ಯಾರ್ಥಿನಿ. ಈಕೆಯ ನೇತೃತ್ವದ ಒಂಬತ್ತು ಬಾಲಕಿಯರ ತಂಡ ಕ್ಯಾನ್ಸರ್ ಗುಣಮುಖರಿಗೆ ಕೇಶದಾನ ಮಾಡಿದೆ. 2020ರಲ್ಲಿ ಆರಂಭವಾದ ಈ ತಂಡದ ಸಹಯೋಗದಲ್ಲಿ 83 ಹುಡುಗಿಯರು ತಮ್ಮ ತಲೆಗೂದಲು ದಾನ ಮಾಡಿದ್ದಾರೆ.

ಸಮಾಜಸೇವೆ ಮಾಡಬೇಕೆಂಬ ತವಕವಿರುವ ಆದ್ಯಾ, ಶಾಲೆಯಲ್ಲಿ ಕಲಿಯುತ್ತಿರುವಾಗ ಕ್ಯಾನ್ಸರ್ ರೋಗಿ ಆಗಿದ್ದ ತನ್ನ ಶಿಕ್ಷಕಿಯ ತಲೆಗೂದಲು ಬೋಳಾಗಿರುವುದನ್ನು, ತಲೆಯ ಸುತ್ತ ಸ್ಕಾರ್ಫ್ ಸುತ್ತಿ ಶಾಲೆಗೆ ಬರುತ್ತಿರುವುದನ್ನು ನೋಡಿ ಬೇಸರಗೊಂಡಿದ್ದಳು. ಹೇಗಾದರೂ ಮಾಡಿ ತನ್ನ ಶಿಕ್ಷಕಿಗೆ ಜೀವನದಲ್ಲಿ ಮರಳಿ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಬೇಕು ಎಂದು ಪಣತೊಟ್ಟಳು. ಕೊರೊನಾ ಕಾಲದಲ್ಲಿ ಮನೆಯಲ್ಲೇ ಇದ್ದುದರಿಂದ ತಲೆಗೂದಲ ಆರೈಕೆ ಚೆನ್ನಾಗಿ ನಡೆದು, ಕೂದಲು ಸೊಂಪಾಗಿ ಬೆಳೆದಿತ್ತು. ಆ ಕೂದಲನ್ನು ಕ್ಯಾನ್ಸರ್ ರೋಗಿಗೆ ವಿಗ್ ತಯಾರಿಸಲು ನೀಡಿದರೆ ಚೆನ್ನಾಗಿರುತ್ತದೆ ಎಂದು ಭಾವಿಸಿ ದಾನ ಮಾಡಿಯೇಬಿಟ್ಟಳು. ತಮಿಳುನಾಡಿನ ವಿಗ್ ತಯಾರಕ ಸಂಸ್ಥೆಗೆ ನೀಡಿದ ಆದ್ಯಾ ತಲೆಗೂದಲು ವಿಗ್ ರೂಪದಲ್ಲಿ ಶಿಕ್ಷಕಿಯ ಮುಡಿಯೇರಿತ್ತು.